**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸತ್ರ ಮೊಕದ್ದಮೆ  ನಂಃ 75/2023

| | | |
|---|---|---|
| ಸಾಕ್ಷಿದಾರರ ಹೆಸರು | - ರಚನ್ | ಪಿಡಬ್ಲೂ - 2 |
| ತಂದೆಯ ಹೆಸರು | - ರವಿ | ಸಿಡಬ್ಲೂ  - 5 |
| ವಯಸ್ಸು | - 23 ವರ್ಷ | |
| ಉದ್ಯೋಗ | - ಖಾಸಗಿ ಕೆಲಸ | |
| ವಾಸ ಸ್ಥಳ | - ಸಿ ಕೆ ಮದುಗುಣಿ , ಬಾಳೆಹೊನ್ನೂರು | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ jitsi app ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 14.08.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ರವಿ ನನ್ನ ತಂದೆ. ಫ್ರಾಸಾ.1 ನನ್ನ ತಾಯಿ. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ನನ್ನ ಮಾವ ಅಂದರೆ ನನ್ನ ತಾಯಿಯ ಅಣ್ಣ. ಚಾಸಾ.6 ನನ್ನ ಅಕ್ಕ. ಚಾಸಾ.2 ನನ್ನ ಸ್ನೇಹಿತ. ಚಾಸಾ.3 ಮತ್ತು ಚಾಸಾ.4 ನನ್ನ ದೊಡ್ಡಮ್ಮನ ಮಕ್ಕಳು. ಚಾಸಾ.7 ರಿಂದ ಚಾಸಾ.9 ಗೊತ್ತು.

2. ಸಿ ಕೆ ಮದುಗುಣಿಯಲ್ಲಿರುವ ನಮ್ಮ ಮನೆಯಲ್ಲಿ ನನ್ನ ತಂದೆ-ತಾಯಿ ಮತ್ತು ನಾನು ವಾಸವಾಗಿದ್ದೆವು. ನನ್ನ ಅಕ್ಕನಾದ ಚಾಸಾ.6 ರವರು ಮಂಗಳೂರಿನಲ್ಲಿ ಖಾಸಗಿ ಕೆಲಸ

ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದಳು. ದಿಃ 04.03.2023 ರಂದು ಆರೋಪಿ ಸಿ ಕೆ ಮದುಗುಣಿಯಲ್ಲಿರುವ ನಮ್ಮ ಮನೆಗೆ ಬಂದು ಅಂದಿನಿಂದ ನಮ್ಮ ಮನೆಯಲ್ಲಿಯೇ ವಾಸವಾಗಿದ್ದರು. ಆತ ಯಾವುದೇ ಕೆಲಸಕ್ಕೆ ಹೋಗದೇ ನಮ್ಮ ಮನೆಯಲ್ಲಿಯೇ ಇರುತ್ತಿದ್ದರು. ಆಗ ನನ್ನ ತಂದೆಯಾದ ರವಿ ಆರೋಪಿಯನ್ನು ಕುರಿತು ಬಂದು ಸುಮಾರು ದಿನಗಳಾಯಿತಲ್ಲ ನೀವು ನಿಮ್ಮ ಮನೆಗೆ ಹೋಗುವುದಿಲ್ಲವೇ ಮತ್ತು ಯಾವುದೇ ಕೆಲಸಕ್ಕೆ ಹೋಗುವುದಿಲ್ಲವೇ ಎಂದು ಕೇಳುತ್ತಿದ್ದರು. ಅದೇ ರೀತಿ ದಿಃ 09.03.2023 ರಂದು ನನ್ನ ತಂದೆ ಆರೋಪಿಯನ್ನು ಕುರಿತು ಯಾವಾಗ ಮನೆಗೆ ಹೋಗುತ್ತೀಯಾ ಎಂದು ಕೇಳಿದಾಗ ಆತ ದಿಃ 10.03.2023 ರಂದು ಮಧ್ಯಾಹ್ನ ನಮ್ಮ ಮನೆಯನ್ನು ಬಿಟ್ಟು ಹೋಗುವುದಾಗಿ ಹೇಳಿದ್ದನು. ಆಗ ಆರೋಪಿ ನನ್ನ ತಾಯಿಯನ್ನು ಕುರಿತು ನಿನ್ನ ಗಂಡ ನನಗೆ ಮನೆ ಬಿಟ್ಟು ಹೋಗು ಎಂದು ಹೇಳುತ್ತಿದ್ದಾನೆ ಆತ ಹಾಗೆ ಹೇಳಿದರೆ ಆತನಿಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿದ್ದನು.

3. ದಿಃ 10.03.2023 ರಂದು ನನ್ನ ತಂದೆ ಎಂದಿನಂತೆ ಕೆಲಸಕ್ಕೆ ಹೋಗಿ ವಾಪಸ್ಸು ಮನೆಗೆ ಬಂದಾಗ ಆರೋಪಿ ಮನೆಯಲ್ಲಿಯೇ ಇರುವುದನ್ನು ನೋಡಿ ಮಧ್ಯಾಹ್ನ ಮನೆ ಬಿಟ್ಟು ಹೋಗುವುದಾಗಿ ಹೇಳಿದ್ದೆ ಯಾಕೆ ಹೋಗಿಲ್ಲ ಎಂದು ಆರೋಪಿಯನ್ನು ಕೇಳಿ ಬೈಯುತ್ತಿದ್ದರು. ಆಗ ಸಮಯ ಮಧ್ಯಾಹ್ನ 3 ರಿಂದ 3.30 ಗಂಟೆಯಾಗಿತ್ತು. ಆಗ ನನ್ನ ತಾಯಿ ನನ್ನ ತಂದೆಯನ್ನು ಮನೆಯ ಒಳಗೆ ಕರೆದು ಕೂರಿಸಿ ಆರೋಪಿಯನ್ನು ಮನೆಯಿಂದ ಹೊರಗೆ ಕಳುಹಿಸಿ ಬಾಗಿಲನ್ನು ಹಾಕಿಕೊಂಡರು. ಸಂಜೆ 4.00 ಗಂಟೆ ಸುಮಾರಿಗೆ ನನ್ನ ತಂದೆ

ಮನೆಯಿಂದ ಹೊರಗೆ ಹೋಗಿ ನಮ್ಮ ಮನೆಯ ಮುಂದೆ ಇರುವ ನ.ರಾ.ಪುರ-ಶಿವಮೊಗ್ಗ ರಸ್ತೆ ಬದಿಯಲ್ಲಿ ಕುಳಿತುಕೊಡಿದ್ದರು. ಆಗ ಆರೋಪಿ ಸಹ ಅಲ್ಲೆ ಇದ್ದುದ್ದನ್ನು ನೋಡಿ ನನ್ನ ತಂದೆ ಇನ್ನು ಯಾಕೆ ಮನೆ ಬಿಟ್ಟು ಹೋಗಿಲ್ಲ ಎಂದು ಕೇಳಿ ಅವರಿಬ್ಬರು ಬೈದಾಡಿಕೊಳ್ಳುತ್ತಿದ್ದರು. ನನ್ನ ತಂದೆ ಸೂಳೇಮಗನೇ ನಮ್ಮ ಮನೆಯನ್ನು ಬಿಟ್ಟು ಹೋಗುವುದಿಲ್ಲವೇ ಎಂದು ಆರೋಪಿಗೆ ಬೈದಾಗ ಆರೋಪಿ ನಾನು ನನ್ನ ತಂಗಿಯ ಮನೆಗೆ ಬಂದಿದ್ದೇನೆ ನೀನು ಯಾರು ಕೇಳಲು ಸೂಳೇಮಗನೇ ಎಂದು ಕೆಟ್ಟ ಮಾತುಗಳಿಂದ ಬೈದು ನಮ್ಮ ಶೆಡಿನಲ್ಲಿದ್ದ ಉದ್ದನೆಯ ಗುದ್ದಲಿ ಅಥವಾ ಹಾರೆಯನ್ನು ತೆಗೆದುಕೊಂಡು ಹೋಗಿ ನನ್ನ ತಂದೆಯ ಕುತ್ತಿಗೆಗೆ ಹೊಡೆದಿದ್ದನ್ನು ನೋಡಿ ನನ್ನ ತಾಯಿ ಕೂಗಿಕೊಂಡರು. ಆಗ ನಾನು ಮನೆಯ ಒಳಗಿನಿಂದ ಓಡಿ ಬಂದು ನೋಡಿದಾಗ ಆರೋಪಿ ನನ್ನ ತಂದೆಯ ಕುತ್ತಿಗೆ ಮತ್ತು ಮೂಗಿಗೆ 3 ರಿಂದ 4 ಪೆಟ್ಟು ಹೊಡೆದಿದ್ದನು. ನನ್ನ ತಂದೆಗೆ ಗಾಯವಾಗಿ ರಕ್ತ ಬರುತ್ತಿತ್ತು ಮತ್ತು ಅಸ್ವಸ್ತವಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ನಾನು ನನ್ನ ತಾಯಿ ಕೂಗಿಕೊಂಡ ಶಬ್ಧವನ್ನು ಕೇಳಿ ಮನೆಯಿಂದ ಹೊರಗೆ ಬಂದು ನೋಡಿದಾಗ ಆರೋಪಿ ತನ್ನ ಕೈಯಲ್ಲಿ ಗುದ್ದಲಿ ಅಥವಾ ಹಾರೆಯನ್ನು ಹಿಡಿದುಕೊಂಡು ನಿಂತಿದ್ದನು.

4. ನಂತರ ನಾನು ಅಲ್ಲಿಗೆ ಬಂದ ನನ್ನ ಸ್ನೇಹಿತರಾದ ಅರುಣ್ ವೇಗಸ್ ಮತ್ತು ರಚನರವರ ಸಹಾಯದಿಂದ ನನ್ನ ತಂದೆಯನ್ನು ಆಂಬುಲೆನ್ಸಿನಲ್ಲಿ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ವೈದ್ಯರು ನನ್ನ ತಂದೆಗೆ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ

ಕರೆದುಕೊಂಡು ಹೋಗುವಂತೆ ತಿಳಿಸಿದ್ದರಿಂದ ನನ್ನ ತಾಯಿ ಅವರನ್ನು ಆಂಬುಲೆನ್ಸಿನಲ್ಲಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಬೈಕಿನಲ್ಲಿ ಅಲ್ಲಿ ಹೋದೆನು. ಸದರಿ ಆಸ್ಪತ್ರೆಯಲ್ಲಿ ನನ್ನ ತಂದೆಗೆ ಚಿಕಿತ್ಸೆ ನೀಡುತ್ತಿದ್ದ ಸಮಯದಲ್ಲಿ ಅದೇ ದಿನ ಅಂದರೆ ದಿಃ 10.03.2023 ರಂದು ರಾತ್ರಿ 9.30 ಗಂಟೆಗೆ ನನ್ನ ತಂದೆ ಮೃತಪಟ್ಟಿರುತ್ತಾರೆ.

5. ಆರೋಪಿ ನನ್ನ ತಂದೆಗೆ ಹೊಡೆದು ಕೊಲೆ ಮಾಡಿದ ಹಾರೆ ಅಥವಾ ಗುದ್ದಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುದ್ದಲಿಯಂತಿರುವ ಆಯುಧವನ್ನು ನೋಡಿ ಗುರುತಿಸಿ ಆರೋಪಿ ಕೃತ್ಯಕ್ಕೆ ಬಳಸಿದ ಆಯುಧ ಅದೇ ಎಂದು ಅದನ್ನು ತಾವು ಹಾರೆ ಎಂದು ಕರೆಯುವುದಾಗಿ ನುಡಿದಿರುತ್ತಾರೆ. ಸದರಿ ಗುದ್ದಲಿಯನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿರುತ್ತದೆ.

6. ನಂತರ ನನ್ನ ತಾಯಿ ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ದೂರನ್ನು ಕೊಟ್ಟರು. ಪೊಲೀಸರು ಆರೋಪಿಯನ್ನು ಬಂಧಿಸಿದರು. ನಂತರ ಬಾಳೆಹೊನ್ನೂರು ಪೊಲೀಸರು ವೆನ್‌ಲಾಕ್ ಆಸ್ಪತ್ರೆಗೆ ಬಂದು ನನ್ನ ತಂದೆಯ ಶವ ಪರೀಕ್ಷೆ ನಡೆಸಿದರು. ಆಗ ನಾನು, ನನ್ನ ತಾಯಿ ಮತ್ತು ಅಕ್ಕ ಅವರಿಗೆ ಹೇಳಿಕೆಯನ್ನು ನೀಡಿದ್ದೇವೆ .

7. ಸಾಕ್ಷಿಯು ಈಗಾಗಲೇ ನಿಪಿ.9 ರಿಂದ ನಿಪಿ.17 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳಲ್ಲಿ ನನ್ನ ತಂದೆ ರವಿಯ ಶವ ಮತ್ತು ಆತನ ಮೈ ಮೇಲೆ ಆದ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ. ಅವುಗಳನ್ನು ಮಂಗಳೂರಿನ

ವೆನ್‌ಲಾಕ್ ಆಸ್ಪತ್ರೆಯಲ್ಲಿ ಪೊಲೀಸರು ತೆಗೆದುಕೊಂಡಿರುತ್ತಾರೆ. ನನ್ನ ತಂದೆಯ ಸಾವಿಗೆ ಆರೋಪಿಯೇ ಕಾರಣನಾಗಿದ್ದಾನೆ.

ಪಾಟೀ ಸವಾಲುಃ **LADCS** ನ **Chief Defense counsel** ಆದ ಶ್ರೀ ಹೆಚ್.ಟಿ.ಎಸ್.ಕೆ. ವಕೀಲರಿಂದಃ ಆರೋಪಿ ಪರವಾಗಿಃ

8. ನಾನು ಈಗ್ಗೆ 2 ದಿನಗಳಿಂದ ಮಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದೇನೆ. ದಿಃ 04.03.2023 ರ ಹಿಂದೆ ನಾನು ಮಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದೆನು, ಆದರೆ ದಿಃ 04.03.2023 ರಂದು ಊರಿನಲ್ಲಿ ಜಾತ್ರೆ ಇದ್ದ ಕಾರಣ ನಾನು ಸದರಿ ಕೆಲಸವನ್ನು ಬಿಟ್ಟು ಅದೇ ದಿನ ನಮ್ಮ ಊರಿಗೆ ಬಂದಿದ್ದೆನು. ನಾನು ಮನೆಯ ಹತ್ತಿರವೇ ಯಾವುದಾದರೂ ಕೆಲಸವನ್ನು ನೋಡುತ್ತೇನೆಂದು ಮಂಗಳೂರಿನ ಕೆಲಸವನ್ನು ಬಿಟ್ಟು ಬಂದಿದ್ದೆನು. ದಿಃ 04.03.2023 ರ ಹಿಂದೆ ಮಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದ ವಿಚಾರವನ್ನು ಮತ್ತು ಆ ದಿನ ಊರಿಗೆ ವಾಪಸ್ಸು ಬಂದಿದ್ದ ವಿಚಾರವನ್ನು ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿಃ 04.03.2023 ರಂದು ನಾನು ಮನೆಗೆ ಬರುವಷ್ಟರಲ್ಲಿ ರಾತ್ರಿ 7 ರಿಂದ 7.30 ಗಂಟೆಯಾಗಿತ್ತು ಅದಕ್ಕೂ ಮೊದಲೇ ಆರೋಪಿ ನಮ್ಮ ಮನೆಗೆ ಬಂದಿದ್ದನು. ದಿಃ 04.03.2023 ರಂದು ನೀವು ಕೆಲಸವನ್ನು ಬಿಟ್ಟು ನಿಮ್ಮ ಮನೆಗೆ ಬಂದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.
9. ನಿಮ್ಮ ತಂದೆಯ ವಿರುದ್ಧ ಯಾವುದಾದರೂ ಕ್ರಿಮಿನಲ್ ಕೇಸ್ ದಾಖಲಾಗಿದ್ದ ಬಗ್ಗೆ ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಇಲ್ಲ

ಎನ್ನುತ್ತಾರೆ. ನಿಮ್ಮ ತಂದೆ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜೈಲಿನಲ್ಲಿದ್ದ ಸಮಯದಲ್ಲಿ ನಿಮ್ಮ ತಂದೆಗೆ ಮಾನಸಿಕ ಕಾಯಿಲೆ ಇದೆ ಎಂದು ಆತನನ್ನು ನಿಮಾನ್ಸ್ ಆಸ್ಪತ್ರೆಗೆ ಸೇರಸಲಾಗಿತ್ತು ಎಂದರೆ ಸಾಕ್ಷಿ ನಿಮಾನ್ಸ್ ಆಸ್ಪತ್ರೆಗೆ ಸೇರಿಸಿದ್ದ ಬಗ್ಗೆ ನನ್ನ ತಾಯಿ ಹೇಳುತ್ತಿದ್ದರು ಆದರೆ ಉಳಿದ ವಿಚಾರಗಳು ನನಗೆ ಗೊತ್ತಿಲ್ಲ. ನಿಮ್ಮ ತಂದೆಗೆ ಮಧ್ಯಪಾನ ಮಾಡುವ ಹವ್ಯಾಸವಿತ್ತು ಎಂದರ ಸಾಕ್ಷಿ ಕೆಲಸ ಮುಗಿಸಿದ ಮೇಲೆ ಸ್ವಲ್ಪ ಕುಡಿಯುತ್ತಿದ್ದರು ಎನ್ನುತ್ತಾರೆ. ನಿಮ್ಮ ತಂದೆಗೆ ಜಾಂಡೀಸ್ ಕಾಯಿಲೆ ಇತ್ತು ಎಂದರೆ ಸಾಕ್ಷಿ ಮೊದಲು ಇತ್ತು ನಂತರ ಔಷಧಿ ತೆಗೆದುಕೊಂಡ ಬಳಿಕ ವಾಸಿಯಾಗಿತ್ತು. ಅತಿಯಾಗಿ ಮಧ್ಯಪಾನ ಮಾಡುತ್ತಿದ್ದರಿಂದ ನಿಮ್ಮ ತಂದೆಗೆ ಜಾಂಡೀಸ್ ಕಾಯಿಲೆ ಬಂದಿತ್ತು ಎಂದರೆ ಸರಿಯಲ್ಲ.

10. ನಿಮ್ಮ ತಂದೆಗೆ ಆರೋಗ್ಯ ಸರಿಯಿಲ್ಲದ ಕಾರಣ ನಿಮ್ಮ ತಾಯಿ ಆತನನ್ನು ಯಾವುದೇ ಕೆಲಸಕ್ಕೆ ಕಳುಹಿಸುತ್ತಿರಲಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಸಮಯದವರೆಗೆ ಕಳುಹಿಸುತ್ತಿರಲಿಲ್ಲ ಆದರೆ ಘಟನೆಯ ಪೂರ್ವದಲ್ಲಿ 2 ರಿಂದ 3 ತಿಂಗಳ ಹಿಂದಿನಿಂದ ಆತ ಕೆಲಸಕ್ಕೆ ಹೋಗುತ್ತಿದ್ದರು ಎನ್ನುತ್ತಾರೆ. ನಿಮ್ಮ ತಂದೆಗೆ ಆರೋಗ್ಯ ಸರಿಯಿಲ್ಲದ ಸಮಯದಲ್ಲಿ ಆತ ಮನೆಯಲ್ಲಿಯೇ ಇರುತ್ತಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ನಿಮ್ಮ ತಂದೆಗೆ ಸರಿಯಾಗಿ ಓಡಾಡಲು ಆಗದೇ ಕೋಲನ್ನು ಬಳಸುತ್ತಿದ್ದರು ಮತ್ತು ನಿಶಕ್ತರಾಗಿದ್ದರು ಎಂದರೆ ಸರಿ . ಆ ರೀತಿ ಅವರು ಕೋಲನ್ನು ಹಿಡಿದು ಓಡಾಡುತ್ತಿದ್ದ ಸಂದರ್ಭದಲ್ಲಿ ಒಮ್ಮೆ ಒಂದು ಬಸ್ಸು ಮತ್ತು ಬೈಕು ಅವರಿಗೆ ತಗುಲಿ ಬಸ್ಸಿನಿಂದ ಅಪಘಾತವಾಗುವುದು ತಪ್ಪಿತ್ತು

ಆದರೆ ಬೈಕಿನಿಂದ ಅಪಘಾತವಾಗಿತ್ತು ಎಂದರೆ ಸಾಕ್ಷಿ ಬೈಕು ಸ್ವಲ್ಪ ತಾಗಿತ್ತು ಎನ್ನುತ್ತಾರೆ.

11. ನೀವು ಒಬ್ಬ ಹುಡುಗಿಯನ್ನು ಪ್ರೀತಿ ಮಾಡುತ್ತಿದ್ದಿರಿ ಎಂದರೆ ಸರಿ. ಆ ಹುಡುಗಿಗೆ 16 ವರ್ಷ ವಯಸ್ಸಾಗಿದ್ದ ಕಾರಣ ನಿಮ್ಮ ತಂದೆ ನಿಮ್ಮ ಪ್ರೀತಿಯನ್ನು ವಿರೋಧಿಸಿದ್ದರಿಂದ ನಿಮ್ಮ ಮತ್ತು ನಿಮ್ಮ ತಂದೆಯ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಪ್ರೀತಿ ಮಾಡುತ್ತಿದ್ದ ಹುಡುಗಿಯ ವಯಸ್ಸು 21 ಆಗಿತ್ತು ಎನ್ನುತ್ತಾರೆ. ನಿಮ್ಮ ಮದುವೆಯ ವಿಚಾರದಲ್ಲಿ ನಿಮ್ಮ ಮತ್ತು ನಿಮ್ಮ ತಂದೆಯ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಅದೇ ವಿಚಾರಕ್ಕೆ ಸಂಬಂಧಿಸಿದಂತೆ ನೀವು ಒಮ್ಮೆ ನಿಮ್ಮ ತಂದೆಗೆ ಹೊಡೆದಿದ್ದೀರಿ ಎಂದರೆ ಸರಿಯಲ್ಲ. ಆ ಬಗ್ಗೆ ನಿಮ್ಮ ತಂದೆ ನಿಮ್ಮ ವಿರುದ್ಧ ಪೊಲೀಸರಿಗೆ ದೂರನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆಗ ಪೊಲೀಸರು ನಿಮ್ಮನ್ನು ಕರೆಯಿಸಿ ಬುದ್ದಿ ಹೇಳಿ ಕಳುಹಿಸಿದ್ದರು ಎಂದರೆ ಸರಿಯಲ್ಲ. ನಂತರ ನೀವು ಬೆಂಗಳೂರಿಗೆ ಹೋದವರು ವಾಪಸ್ಸು ಊರಿಗೆ ಬಂದಿರಲಿಲ್ಲ ಎಂದರೆ ಸಾಕ್ಷಿ ಬೆಂಗಳೂರಿಗೆ ಕೆಲಸಕ್ಕೆ ಹೋಗಿದ್ದೆನು ಆದರೆ ವಾಪಸ್ಸು ಬಂದಿದ್ದೇನೆ ಎನ್ನುತ್ತಾರೆ. ಮೇಲೆ ಹೇಳಿದಂತೆ ಪೊಲೀಸರು ನಿಮ್ಮನ್ನು ದಿಃ 04.03.2023 ರಂದು ಕರೆಯಿಸಿ ವಿಚಾರಿಸಿದ್ದಾರೆ ಮತ್ತು ಅದೇ ದಿನ ರಾತ್ರಿ ನೀವು ಬೆಂಗಳೂರಿಗೆ ಹೋದವರು ನಿಮ್ಮ ತಂದೆ ಮೃತ ಪಟ್ಟ ಬಳಿಕವಷ್ಟೇ ಊರಿಗೆ ವಾಪಸ್ಸು ಬಂದಿದ್ದೀರಿ ಎಂದರೆ ಸರಿಯಲ್ಲ.

12. ದಿಃ 10.03.2023 ರಂದು ನೀವು ನಿಮ್ಮ ಮನೆಯಲ್ಲಿ ಇರಲಿಲ್ಲ ನಿಮ್ಮ ತಂದೆ ಮೃತಪಟ್ಟ ಬಳಿಕವಷ್ಟೇ ಮನೆಗೆ ವಾಪಸ್ಸು

ಬಂದಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆ ನಿಶಕ್ತರಾಗಿದ್ದ ಸಂದರ್ಭದಲ್ಲಿ ರಸ್ತೆಯಲ್ಲಿ ಓಡಾಡುವ ವಾಹನಗಳನ್ನು ಅಡ್ಡಗಟ್ಟಿ ಮದ್ಯಪಾನ ಮಾಡಲು ಹಣವನ್ನು ಬೇಡಿ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆ ನಿಮ್ಮ ತಾಯಿಯ ಶೀಲವನ್ನು ಶಂಕಿಸಿ ಆಕೆಗೆ ಯಾವಾಗಲೂ ಬೈಯುತ್ತಿದ್ದರು ಎಂದರೆ ಸರಿಯಲ್ಲ. ವಾಚರ್ ಸಿದ್ದಪ್ಪ ಎಂಬುವವರು ನನಗೆ ಗೊತ್ತಿಲ್ಲ. ಸದರಿ ಸಿದ್ದಪ್ಪರವರು ಗಲಾಟೆ ಮಾಡಿಕೊಳ್ಳುತ್ತಿದ್ದ ನಿಮ್ಮ ತಂದೆ ತಾಯಿಗೆ  ಬುದ್ದಿ ವಾದವನ್ನು ಹೇಳಿದ್ದಾರೆ ಎಂದರೆ ಸರಿಯಲ್ಲ. ಬೇರೆಯವರು ಬಂದು ಬುದ್ಧಿಯನ್ನು ಹೇಳುವಂತಾಯಿತು ಎಂದು ನಿಮ್ಮ ತಂದೆ ಮತ್ತು ತಾಯಿ ಪ್ರತಿನಿತ್ಯ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆ ನಿಶಕ್ತರಾಗಿದಾಗಿನಿಂದಲೂ ನೀವು ಮತ್ತು ನಿಮ್ಮ ತಾಯಿ ಆತನಿಗೆ ಹೊಡೆದು ಬಡಿದು ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ. ಆತನಿಗೆ ಊಟದ ವ್ಯವಸ್ಥೆಯನ್ನು ನೀವು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.  ಮನೆಯ ಒಳಗೆ ಸಹ ನಿಮ್ಮ ತಂದೆಯನ್ನು ನೀವು ಬಿಟ್ಟುಕೊಳ್ಳುತ್ತಿರಲಿಲ್ಲ ಆತ ನಿಮ್ಮ ಮನೆಯ ಪಕ್ಕದಲ್ಲಿರುವ ಶೆಡಿನಲ್ಲಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ.

13. ದಿಃ 04.03.2023 ರಂದು ಆರೋಪಿ ನಿಮ್ಮ ಮನೆಗೆ ಬಂದಿದ್ದಾಗಿ, ನಿಮ್ಮ ತಂದೆ ಆತನನ್ನು ಕುರಿತು ಬಂದು ಸುಮಾರು ದಿನಗಳಾಯಿತು, ಕೆಲಸಕ್ಕೆ ಹೋಗುತ್ತಿಲ್ಲ, ಮನೆ ಬಿಟ್ಟು ಹೋಗು ಎಂದು ಹೇಳುತ್ತಿದ್ದ ವಿಚಾರ ನಿಮ್ಮ ತಾಯಿಯಿಂದ ನಿಮಗೆ ತಿಳಿದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಅದನ್ನು ನೋಡಿದ್ದೇನೆ ಎನ್ನುತ್ತಾರೆ. ಆ ಬಗ್ಗೆ ಪೊಲೀಸರಿಗೆ

ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

14. ಆರೋಪಿ ನನ್ನ ತಾಯಿಯನ್ನು ಕುರಿತು ನಿನ್ನ ಗಂಡ ನನಗೆ ಮನೆ ಬಿಟ್ಟು ಹೋಗು ಎಂದು ಹೇಳುತ್ತಿದ್ದಾನೆ ಆತ ಹಾಗೆ ಹೇಳಿದರೆ ಆತನಿಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿದ್ದನು ಎಂದು ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸಿ ಕೆ ಮದುಗುಣಿಯಲ್ಲಿ ಸುಮಾರು 40 ಮನೆಗಳಿವೆ.

15. ದಿಃ 10.03.2023 ರಂದು ನನ್ನ ತಂದೆ ಎಂದಿನಂತೆ ಕೆಲಸಕ್ಕೆ ಹೋಗಿ ವಾಪಸ್ಸು ಮನೆಗೆ ಬಂದಾಗ ಆರೋಪಿ ಮನೆಯಲ್ಲಿಯೇ ಇರುವುದನ್ನು ನೋಡಿ ಮಧ್ಯಾಹ್ನ ಮನೆ ಬಿಟ್ಟು ಹೋಗುವುದಾಗಿ ಹೇಳಿದ್ದೆ ಯಾಕೆ ಹೋಗಿಲ್ಲ ಎಂದು ಆರೋಪಿಯನ್ನು ಕೇಳಿ ಬೈಯುತ್ತಿದ್ದರು, ಆಗ ಸಮಯ ಮಧ್ಯಾಹ್ನ 3 ರಿಂದ 3.30 ಗಂಟೆಯಾಗಿತ್ತು, ಆಗ ನನ್ನ ತಾಯಿ ನನ್ನ ತಂದೆಯನ್ನು ಮನೆಯ ಒಳಗೆ ಕರೆದು ಕೂರಿಸಿ ಆರೋಪಿಯನ್ನು ಮನೆಯಿಂದ ಹೊರಗೆ ಕಳುಹಿಸಿ ಬಾಗಿಲನ್ನು ಹಾಕಿಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಮ್ಮ ಮನೆಯ ಪಕ್ಕದಲ್ಲಿ ನಮ್ಮ ಅಜ್ಜ ನಾರಾಯಣ ಪೂಜಾರಿರವರ ಮನೆಯಿದೆ. ಮನೆಯ ಮುಂದೆ ಪ್ರಶಾಂತ್ ವೇಗಸ್ ರವರ ಮನೆಯಿದೆ. ನಿಮ್ಮ ತಂದೆ ಮತ್ತು ಆರೋಪಿಯ ನಡುವೆ ಬೈದಾಡ ನಡೆದುದ್ದಾಗಿ ಹೇಳಿದ್ದೀರಿ ಆ ಸಮಯದಲ್ಲಿ ಬೇರೆ ಯಾರಾದರೂ ಬಂದಿದ್ದರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿಃ 10.03.2023 ರಂದು ನನ್ನ ತಂದೆ ಕೆಲಸದಿಂದ ಮನೆಗೆ ಬಂದ ಸಮಯದಲ್ಲಿ ಆತ ಮತ್ತು ಆರೋಪಿ ಸ್ವಲ್ಪ ಸಮಯದವರೆಗೆ

ಅಂದರೆ 15 ರಿಂದ 20 ನಿಮಿಷದವರೆಗೆ ಗಲಾಟೆ ಮಾಡಿಕೊಳ್ಳುತ್ತಿದ್ದರು ನಂತರ ಸ್ವಲ್ಪ ಸಮಯದವರೆಗೆ ಸುಮ್ಮನಿದ್ದರು ನಂತರ ಪುನಃ ಗಲಾಟೆ ಮಾಡಿಕೊಂಡರು. ಆ ಸಮಯದಲ್ಲಿ ಸುಮಾರು 8 ರಿಂದ 10 ಸಲ ಅವರು ಗಲಾಟೆ ಮಾಡಿಕೊಂಡರೇ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಆ ಸಮಯದಲ್ಲಿ ನೀವು ಅಲ್ಲಿ ಇದ್ದಿರೆ ಎಂದರೆ ಸಾಕ್ಷಿ ನಾನು ಒಂದು ಬಾರಿ ಆರೋಪಿಯನ್ನು ಕುರಿತು ಯಾಕೆ ಗಲಾಟೆ ಮಾಡುತ್ತೀರಿ ಕಿರಿಕಿರಿ ಮಾಡಬೇಡಿ ಹೋಗಿ ಎಂದು ಹೇಳಿ ಅವರು ಸ್ವಲ್ಪ ಸಮಯದ ಬಳಿಕ ಸರಿ ಹೋಗಬಹುದು ಎಂದು ಸುಮ್ಮನಾದೆನು. ಆ ಸಮಯದಲ್ಲಿ ನೀವು ಪೊಲೀಸರಿಗೆ ಮಾಹಿತಿ ನೀಡಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಅವರು ದಿಃ 04.03.2023 ರ ನಂತರದಲ್ಲಿ 2 ದಿನಗಳವರೆಗೆ ಯಾವುದೇ ಗಲಾಟೆ ಇರಲಿಲ್ಲ ನಂತರದಲ್ಲಿ ಆರೋಪಿ ಮದ್ಯಪಾನ ಮಾಡಿ ಗಲಾಟೆ ಮಾಡುತ್ತಿದ್ದನು ಎನ್ನುತ್ತಾರೆ. ಆ ವಿಚಾರವನ್ನು ನಾನು ಊರಿನವರಿಗೆ ತಿಳಿಸಿಲ್ಲ.

16. ಆರೋಪಿ ಮತ್ತು ನಿಮ್ಮ ತಂದೆ ಮೊದಲಿನಿಂದಲೂ ಅನ್ಯೋನ್ಯವಾಗಿದ್ದರು ಎಂದರೆ ಸಾಕ್ಷಿ ಆರೋಪಿ ನಮ್ಮ ಮನೆಗೆ ಬಂದಾಗ ನನ್ನ ತಂದೆ ಆತನಿಗೆ ಊಟ ತಿಂಡಿ ಮತ್ತು ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಅವರ ನಡುವೆ ಯಾವುದೇ ವೈಮನಸ್ಸು ಇರಲಿಲ್ಲ.

17. ಆರೋಪಿ ಗುದ್ದಲಿ ಅಥವಾ ಹಾರೆಯನ್ನು ಕೈಯಲ್ಲಿ ಹಿಡಿದು ನಿಂತಿದ್ದನು ನೀವು ನೋಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನ.ರಾ.ಪುರ-ಶಿವಮೊಗ್ಗ ರಸ್ತೆಯಲ್ಲಿ ವಾಹನಗಳ

ಓಡಾಡ ಹೆಚ್ಚಾಗಿ ಇರುತ್ತದೆ ಎಂದರೆ ಸರಿ. ನಿಮ್ಮ ತಂದೆ ಮನೆಯಿಂದ ಹೊರಗೆ ಹೋಗಿ ಆರೋಪಿಯೊಂದಿಗೆ ಬೈದಾಡುತ್ತಿದ್ದಾಗಿ ಹೇಳಿದ್ದೀರಿ ಅದನ್ನು ನೀವು ನೋಡಿಲ್ಲ ಎಂದರೆ ಸಾಕ್ಷಿ ನೋಡಿಲ್ಲ ಆದರೆ ಅವರು ಬೈದಾಡುತ್ತಿದ್ದ ಶಬ್ಧ ಕೇಳಿಸುತ್ತಿತ್ತು ಎನ್ನುತ್ತಾರೆ. ಆ ಸಮಯದಲ್ಲಿ ನಾನು ನಮ್ಮ ಮನೆಯ ಹಿಂದೆ ಕೆಲಸ ಮಾಡುತ್ತಿದ್ದೆನು.

18. ನನ್ನ ತಂದೆ ಇನ್ನು ಯಾಕೆ ಮನೆ ಬಿಟ್ಟು ಹೋಗಿಲ್ಲ ಎಂದು ಕೇಳಿ ಅವರಿಬ್ಬರು ಬೈದಾಡಿಕೊಳ್ಳುತ್ತಿದ್ದರು, ನನ್ನ ತಂದೆ ಸೂಳೇಮಗನೇ ನಮ್ಮ ಮನೆಯನ್ನು ಬಿಟ್ಟು ಹೋಗುವುದಿಲ್ಲವೇ ಎಂದು ಆರೋಪಿಗೆ ಬೈದಾಗ ಆರೋಪಿ ನಾನು ನನ್ನ ತಂಗಿಯ ಮನೆಗೆ ಬಂದಿದ್ದೇನೆ ನೀನು ಯಾರು ಕೇಳಲು ಸೂಳೇಮಗನೇ ಎಂದು ಕೆಟ್ಟ ಮಾತುಗಳಿಂದ ಬೈದಿದ್ದಾಗಿ ಹೇಳಿದ್ದೀರಿ ಅದನ್ನು ನೀವು ಕೇಳಿಸಿಕೊಂಡಿಲ್ಲ ಮತ್ತು ನೋಡಿಲ್ಲ ಎಂದರೆ ಸಾಕ್ಷಿ ನಮ್ಮ ಮನೆಯಲ್ಲಿಯೂ ಸಹ ಆರೋಪಿ ಮತ್ತು ನನ್ನ ತಂದೆ ಆ ರೀತಿ ಬೈದಾಡಿಕೊಂಡಿದ್ದಾರೆ ಆಗ ಅದನ್ನು ನೋಡಿದ್ದೇನೆ ಮತ್ತು ಕೇಳಿಸಿಕೊಂಡಿದ್ದೇನೆ ಆದರೆ ಮನೆಯ ಹೊರೆಗೆ ರಸ್ತೆಯ ಬದಿಯಲ್ಲಿ ಆ ರೀತಿ ಬೈದಾಡಿಕೊಂಡಿದ್ದನು ನಾನು ನೋಡಿಲ್ಲ ಮತ್ತು ಕೇಳಿಸಿಕೊಂಡಿಲ್ಲ. ಆ ಸಮಯದಲ್ಲಿ ನಿಮ್ಮ ತಾಯಿ ಎಲ್ಲಿದ್ದರು ಎಂದರೆ ಸಾಕ್ಷಿ ಆಕೆ ಶೆಡಿನಲ್ಲಿ ಸೌದೆಯನ್ನು ತರಲು ಹೋಗಿದ್ದರು ಎನ್ನುತ್ತಾರೆ. ಆರೋಪಿ ನನ್ನ ತಂದೆಗೆ ಹೊಡೆದಿದ್ದನು ನಾನು ನೋಡಿಲ್ಲ ಆದರೆ ಹೊಡೆದು ಬರುತ್ತಿದ್ದನು ನೋಡಿದ್ದೇನೆ. ಆ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿದ್ದೇನೆ. ಆರೋಪಿ ನಿಮ್ಮ ತಂದೆಯ ಕುತ್ತಿಗೆಗೆ ಮತ್ತು ಮೂಗಿಗೆ 3 ರಿಂದ 4 ಪೆಟ್ಟು ಹೊಡೆದಿದ್ದಾಗಿ ಹೇಳಿರುವುದು

ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ತಂದೆಗೆ ರಕ್ತಗಾಯವಾಗಿ ರಕ್ತದ ಮಡುವಿನಲ್ಲಿ ಅಸ್ವಸ್ತವಾಗಿ ಬಿದ್ದಿದ್ದರು ಎಂದು ಹೇಳಿದ್ದೀರಿ ಆ ರೀತಿ ಆತ ರಸ್ತೆಯಲ್ಲಿ ಹೋಗುತ್ತಿದ್ದ ವಾಹನವೊಂದು ಹೊಡೆದುಕೊಂಡು ಹೋಗಿದ್ದರಿಂದ ಬಿದಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಆರೋಪಿ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

19. ಆಂಬುಲೆನ್ಸನ್ನು ಯಾರು ಕರೆಸಿದ್ದರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಆಂಬುಲೆನ್ಸ್ 20 ನಿಮಿಷದ ಒಳಗೆ ಬಂದಿದೆ ಆದರೆ ಆಗ ಸಮಯ ಎಷ್ಟಾಗಿತ್ತು ಎಂದು ನೆನಪಿಲ್ಲ. ಸಿಕೆ ಮದುಗುಣಿಯಿಂದ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಸುಮಾರು 4 ಕಿಲೋ ಮೀಟರ್ ದೂರವಾಗುತ್ತದೆ. ಅರುಣ್ ವೇಗಸ್ ರವರು ಮನೆಯಿಂದ ಪೇಟೆಗೆ ಹೋಗುವಾಗ ನನ್ನ ತಂದೆಗೆ ಪೆಟ್ಟಾಗಿದ್ದನ್ನು ನೋಡಿ ಅಲ್ಲಿಗೆ ಬಂದಿದ್ದರು. ಚಾಸಾ.2 ರವರಿಗೆ ನಾನು ಪೋನ್ ಮಾಡಿ ಕರೆಸಿದ್ದೆನು. ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದು ನೆನಪಿಲ್ಲ. ಅಲ್ಲಿ ಯಾವ ವೈದ್ಯರು ನಿಮ್ಮ ತಂದೆಗೆ ಚಿಕಿತ್ಸೆ ನೀಡಿದ್ದಾರೆ ಎಂದರೆ ಸಾಕ್ಷಿ ನನ್ನ ತಾಯಿ ಒಳಗೆ ಹೋಗಿದ್ದಾರೆ ಮತ್ತು ಹೆಚ್ಚು ಜನರಿದ್ದ ಕಾರಣ ನಾನು ಹೊರಗೆ ನಿಂತಿದ್ದೆನು ಎನ್ನುತ್ತಾರೆ. ಅಲ್ಲಿ ವೈದ್ಯರು ಪ್ರಥಮ ಚಿಕಿತ್ಸೆ ನೀಡಿ ಹೊಲಿಕೆ ಹಾಕಿದ್ದಾರೆಯೇ ಎಂದರೆ ಸಾಕ್ಷಿ ರಕ್ತವನ್ನು ಹೊರೆಸಿ ಚಿಕಿತ್ಸೆ ಕೊಟ್ಟಿದ್ದಾರೆ ಎನ್ನುತ್ತಾರೆ. ಬಾಳೆಹೊನ್ನೂರು ಆಸ್ಪತ್ರೆಗೆ ಬಂದಿದ್ದರು ಆದರೆ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಬಾಳೆಹೊನ್ನೂರು ಆಸ್ಪತ್ರೆಯಲ್ಲಿ ನಿಮ್ಮ

ತಂದೆಗೆ ಚಿಕಿತ್ಸೆಯನ್ನು ನೀಡಿದ ಬಳಿಕ ವೆನ್‌ಲಾಕ್ ಆಸ್ಪತ್ರೆಗೆ ಹೋಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

20. ನನ್ನ ತಾಯಿ ನನ್ನ ತಂದೆಯನ್ನು ಆಂಬುಲೆನ್ಸಿನಲ್ಲಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಾನು ಬೈಕಿನಲ್ಲಿ ಅಲ್ಲಿ ಹೋದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ದಿನ ನೀವು ಪೊಲೀಸರಿಗೆ ದೂರನ್ನು ನೀಡಿಲು ತೊಂದರೆ ಇತ್ತೇ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ತಾಯಿಯ ಬಟ್ಟೆಗಳು ರಕ್ತವಾಗಿದ್ದರಿಂದ ಅವರಿಗೆ ಬಟ್ಟೆಗಳನ್ನು ತರಲು ಮನೆಗೆ ಹೋಗಿದ್ದೆನು ಎನ್ನುತ್ತಾರೆ. ನಂತರ ಅವುಗಳನ್ನು ತೆಗೆದುಕೊಂಡು ಬೈಕಿನಲ್ಲಿ ಮಂಗಳೂರಿಗೆ ಹೋಗಿದ್ದೆನು. ನನ್ನ ತಾಯಿ ಮಂಗಳೂರಿನ ಆಸ್ಪತ್ರೆಗೆ ನನ್ನ ತಂದೆಯನ್ನು ಕರೆದುಕೊಂಡು ಹೋದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ಬಟ್ಟೆಯನ್ನು ತರಲು ನಾನು ಮನೆಗೆ ವಾಪಸ್ಸು ಹೋದಾಗ ಸಂಜೆ 4.30 ರಿಂದ 4.45 ಗಂಟೆಯಾಗಿತ್ತು.

21. ನಾನು ಮಂಗಳೂರಿಗೆ ಹೋದಾಗ ಸಮಯ ರಾತ್ರಿ 9.15 ಗಂಟೆಯಾಗಿತ್ತು. ಮು.ಮಾ.2 ನ್ನು ಹಾರೆ ಅಥವಾ ಗುದ್ದಲಿ ಎಂದು ಕರೆಯಲಾಗುವುದಿಲ್ಲ ಬದಲಿಗೆ ಅದನ್ನು ಸಲಿಕೆ ಎಂದು ಕರೆಯಲಾಗುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮು.ಮಾ.2 ಎಂದು ಗುರುತಿಸಲ್ಪಟ್ಟಿರುವ ಹಾರೆಯನ್ನು ಎಲ್ಲ ಕಡೆ ಎಲ್ಲರ ಮನೆಯಲ್ಲಿ ಬಳಸಲಾಗುತ್ತದೆ ಎಂದರೆ ಸರಿ. ನಾನು ನನ್ನ ತಾಯಿಯ ಕೂಗಾಟದ ಶಬ್ಧ ಕೇಳಿ ಬಂದು ನೋಡಿದಾಗ ಮು.ಮಾ.2 ನ್ನು ಆರೋಪಿ ತನ್ನ ಕೈಯಲ್ಲಿ ಹಿಡಿದು ನಮ್ಮ ಶೆಡಿನ ಗೇಟಿನ ಹತ್ತಿರ ನಿಂತಿದ್ದನು. ಅದನ್ನು ಎಷ್ಟು ದೂರದಿಂದ ನೀವು

ನೋಡಿದ್ದೀರಿ ಎಂದರೆ ಸಾಕ್ಷಿ ಸುಮಾರು 4 ಅಡಿ ಅಂತರದಲ್ಲಿ ಎನ್ನುತ್ತಾರೆ. ನಂತರ ಅದನ್ನು ಪೊಲೀಸರು ಯಾವಾಗ ಎಲ್ಲಿಂದ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆಯಲ್ಲಿ ಆ ರೀತಿ ಎರಡು ಹಾರೆ ಅಥವಾ ಗುದ್ದಲಿಗಳು ಇದ್ದವು. ಆರೋಪಿ ಕೈಯಲ್ಲಿ ಇದ್ದ ಹಾರೆ ಮು.ಮಾ.2 ಎಂದು ಗುರುತಿಸಿರುವ ಹಾರೆಯೇ ಎಂದು ಹೇಳಲು ನಿಮಗೆ ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯ ಕೈಯಲ್ಲಿ ಇದ್ದ ಹಾರೆ ಅಥವಾ ಗುದ್ದಿಗೆ ಮರದ ಹಿಡಿ ಇತ್ತು ನಮ್ಮ ಮನೆಯಲ್ಲಿ ಇರುವ ಇನ್ನೊಂದು ಹಾರೆಗೆ ಸ್ಟೀಲಿನ ಹಿಡಿ ಇದೆ ಎನ್ನುತ್ತಾರೆ. ಮು.ಮಾ.2 ಕ್ಕೂ ಕೃತ್ಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

22. ದೂರನ್ನು ನನ್ನ ತಾಯಿ ಬಾಳೆಹೊನ್ನೂರಿನ ಆಸ್ಪತ್ರೆಯ ಹತ್ತಿರ ಕೊಟ್ಟಿದ್ದಾರೆ ಮತ್ತೊಂದು ದೂರನ್ನು ನಮ್ಮ ಮನೆಯ ಹತ್ತಿರ ಗಲಾಟೆಯಾದ ದಿನವೇ ಕೊಟ್ಟಿದ್ದಾರೆ . ಪೊಲೀಸರು ಮಂಗಳೂರಿನ ಆಸ್ಪತ್ರೆಗೆ ಬಂದಿದ್ದಾಗಿ ಹೇಳಿದ್ದೀರಿ ಆಗ ನೀನು, ನಿಮ್ಮ ಅಕ್ಕ ಮತ್ತು ನಿಮ್ಮ ತಾಯಿ ಅವರಿಗೆ ಹೇಳಿಕೆ ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಇಬ್ಬರು ಪೊಲೀಸರು ಬಂದಿದ್ದರು ಅವರ ಹೆಸರು ಮತ್ತು ಹುದ್ದೆ ನನಗೆ ನೆನಪಿಲ್ಲ. ಯಾವಾಗ ಎಷ್ಟು ಗಂಟೆಗೆ ಬಂದಿದ್ದರು ಮತ್ತು ನೀವು ಎಷ್ಟು ಗಂಟೆಗೆ ನೀವು ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸಾಕ್ಷಿ ದಿಃ 11.03.2023 ರಂದು ಮಧ್ಯಾಹ್ನದ ನಂತರ ಪೊಲೀಸರು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಬಂದಿದ್ದರು ಆಗ ನಾನು ಅವರಿಗೆ ಹೇಳಿಕೆಯನ್ನು ನೀಡಿದ್ದೇನೆ ಎನ್ನುತ್ತಾರೆ.

23. ನಿಪಿ.9 ರಿಂದ 17 ಪೋಟೋಗಳಲ್ಲಿ ಕಂಡು ಬರುವ ಗಾಯಗಳು ಅಪಘಾತದಿಂದ ಆದ ಗಾಯಗಳು ಎಂದರೆ ಸರಿಯಲ್ಲ. ನಿಮ್ಮ ತಂದೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ನಿಮ್ಮ ತಾಯಿ ಮತ್ತು ನಿಮ್ಮ ಮದುವೆಯ ವಿಚಾರದಲ್ಲಿ ನಿಮಗೆ ತೊಂದರೆ ಕೊಡುತ್ತಿದ್ದರು ಎನ್ನುವ ಕಾರಣಕ್ಕೆ ಅಪಘಾತದಲ್ಲಿ ಆದ ಗಾಯಗಳಿಗೆ ನಿಮ್ಮ ತಂದೆ ಮೃತಪಟ್ಟಿದ್ದರು ಸಹ ನೀವು ಮತ್ತು ನಿಮ್ಮ ತಾಯಿ ನಿಮ್ಮ ತಂದೆಗೆ ನೀಡುತ್ತಿದ್ದ ಕಿರುಕುಳ ಆರೋಪಿಗೆ ತಿಳಿದ್ದಿದರಿಂದ ಆತ ನಿಮ್ಮ ವಿರುದ್ಧ ದೂರು ಕೊಡಬಹುದು ಎಂದು ಯೋಚಿಸಿ ನೀವೆ ಆತನ ವಿರುದ್ಧ ಸುಳ್ಳು ದೂರನ್ನು ನಿಮ್ಮ ತಾಯಿಯಿಂದ ಕೊಡಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ